# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಐವನ್ ಡಿ. ಸೋಜಾ (ವಿಧಾನ ಸಭಾ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **1203** |
| ಉತ್ತರಿಸಬೇಕಾದ ದಿನಾಂಕ | 17.12.2025 |
| ಉತ್ತರಿಸಬೇಕಾದಸಚಿವರು | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಗೃಹ ಮಂಡಳಿ ವತಿಯಿಂದ ಮಡಾಯ ಸೂರತ್ಕಲ್‌ನಲ್ಲಿ ಸೈಟುಗಳ ಹಂಚಿಕೆಗಾಗಿ 600 ಕ್ಕೂ ಹೆಚ್ಚು ಅಧಿಕಾ ಅರ್ಜಿಗಳನ್ನು ಮತ್ತು ಹಣವನ್ನು ಪಡೆದು ವರ್ಷಗಳೇ ಕಳೆದರು ವಿತರಿಸಲು ಈವರೆಗೂ ಕ್ರಮ ಕೈಗೊಳ್ಳದೆ ಈ ಬಗ್ಗೆ ತೊಂದರೆ ನೀಡುತ್ತಿರುವುದನ್ನು ಇಲಾಖೆ ಗಮನಿಸಿದ ವಿವರ ನೀಡುವುದು ; | ಕರ್ನಾಟಕ ಗೃಹ ಮಂಡಳಿ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಸುರತ್ಕಲ್ ಹೋಬಳಿ, ಮಧ್ಯ ಗ್ರಾಮದಲ್ಲಿ ಅನುಪಾತದ ಪಾಲುದಾರಿಕೆಯಡಿ ವಸತಿ ಯೋಜನೆಯನ್ನು ಕೈಗೊಳ್ಳಲು ಖಾಸಗಿ ಜಮೀನು ಮಾಲೀಕರಿಂದ ಪ್ರಸ್ತಾವನೆ ಬಂದಿದ್ದು, ಯೋಜನೆ ಕೈಗೊಳ್ಳುವ ಮುನ್ನ ಸಾರ್ವಜನಿಕರಿಂದ ಬೇಡಿಕೆ ಸಮೀಕ್ಷೆಯನ್ನು ದಿನಾಂಕ:19.11.2022 ರಂದು ಕರೆಯಲಾಗಿರುತ್ತದೆ. ಸದರಿ ಬೇಡಿಕೆ ಸಮೀಕ್ಷೆಗೆ ಸ್ಪಂಧಿಸಿ ಒಟ್ಟು 557 ಅರ್ಜಿಗಳು ಸ್ವೀಕೃತವಾಗಿರುತ್ತದೆ.<br><br>ಸದರಿ ಜಮೀನಿನ ಭೂಮಾಲೀಕರು ಪ್ರತ್ಯೇಕವಾಗಿ ಎರಡು ಭಾಗಗಳಲ್ಲಿ ಜಮೀನು ಪ್ರಸ್ತಾವನೆ ಸಲ್ಲಿಸಿದ್ದು, ಎರಡು ಜಮೀನುಗಳ ಮಧ್ಯೆ ಸಂಪರ್ಕ ರಸ್ತೆ ಇರುವುದಿಲ್ಲ. ಎರಡು ಜಮೀನುಗಳ ಮಧ್ಯ ಸರ್ಕಾರಿ ಜಮೀನಿದ್ದು, ಸರ್ಕಾರಿ ಜಮೀನಿನಲ್ಲಿ ಸಂಪರ್ಕ ರಸ್ತೆಗೆ ಮಾತ್ರ ಉಪಯೋಗಿಸಿಕೊಳ್ಳಲು ದಿನಾಂಕ:27.06.2025 ರಂದು ಸಹಾಯಕ ಆಯುಕ್ತರು, ಮಂಗಳೂರು ಉಪ ವಿಭಾಗ ರವರ ಸಂಪರ್ಕ ರಸ್ತೆ ಮಂಜೂರು ಮಾಡಿರುತ್ತಾರೆ.<br><br>ಸದರಿ ಜಮೀನು ತುಂಬಾ ಏರು ಪೇರು ಇರುವುದರಿಂದ ಯೋಜನೆಯ ಆರ್ಥಿಕ ಕಾರ್ಯಸಾಧ್ಯತೆ ಅನುಗುಣವಾಗಿ ಒಂದೇ ಹಂತದಲ್ಲಿ ಬಡಾವಣೆ ನಿರ್ಮಾಣ ಮಾಡುವ ಬದಲು ವಿವಿಧ ಹಂತಗಳಲ್ಲಿ ಬಡಾವಣೆಯನ್ನು ನಿರ್ಮಾಣ ಮಾಡುವ ಕುರಿತು ಕಾರ್ಯ ಯೋಜನೆ ರೂಪಿಸುವುದರಿಂದ ಮಂಡಳಿಗೆ ಆರ್ಥಿಕವಾಗಿ ಅನುಕೂಲವಾಗುತ್ತದೆ ಎಂದು ತಾಂತ್ರಿಕ ಪರಿಣಿತರ ಸಮಿತಿಯು ದಿನಾಂಕ:15.02.2025 ರಂದು ಸ್ಥಳ ಪರಿವೀಕ್ಷಣೆಯಲ್ಲಿ ಅಭಿಪ್ರಾಯಿಸಿರುತ್ತಾರೆ.<br><br>ತಾಂತ್ರಿಕ ಸಮಿತಿಯ ವರದಿಯಂತೆ ವಿವರವಾದ ಅಂದಾಜು ಪಟ್ಟಿಯನ್ನು |

| | | |
|---|---|---|
| | . | ತಯಾರಿಸಿದ್ದು, ಸದರಿ ವಸತಿ ಯೋಜನೆಯನ್ನು ಮಂಡಳಿಗೆ ಆರ್ಥಿಕವಾಗಿ ನಷ್ಟವಾಗದಂತೆ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ. |
| ಆ) | ನಗರದಲ್ಲಿ ಸಾರ್ವಜನಿಕರು ನಿವೇಶನ ಪಡೆಯಲು ಅರ್ಜಿ ನೀಡಿದ್ದರು ಇಲಾಖೆ ಖಾಸಗಿಯವರ ಜೊತೆ ಸೇರಿ ಸರ್ಕಾರಕ್ಕೆ ವಂಚಿಸುತ್ತಿರುವುದು ಕರ್ನಾಟಕ ಗೃಹ ಮಂಡಳಿಯ ಗ್ರಾಮಣದಲ್ಲಿದೆಯೇ ವಿವರ ನೀಡುವುದು ; | ಈ ಸಂಬಂಧ ಮಂಡಳಿಯಲ್ಲಿ ಯಾವುದೇ ಪ್ರಕರಣಗಳು ಇರುವುದಿಲ್ಲ. |
| ಇ) | ಸರ್ಕಾರದ ಅಧಿಕೃತ ಸಂಸ್ಥೆಯಾದ ಕರ್ನಾಟಕ ಗೃಹ ಮಂಡಳಿಯು ಕಳೆದ ಐದು ವರ್ಷಗಳಿಂದ ಮಂಗಳೂರು ನಗರ ಪ್ರದೇಶಗಳಲ್ಲಿ ಎಷ್ಟು ಮನೆಗಳನ್ನು ಮತ್ತು ನಿವೇಶನಗಳನ್ನು ಹಂಚಿಕೆ ಮಾಡಿದೆ ಬೇಡಿಕೆ ಎಷ್ಟು ವಿವರ ನೀಡುವುದು ; | ಕರ್ನಾಟಕ ಗೃಹ ಮಂಡಳಿ ವತಿಯಿಂದ ಮಂಗಳೂರು ನಗರದ ಪ್ರದೇಶದಲ್ಲಿ ಕಳೆದ ಐದು ವರ್ಷಗಳಲ್ಲಿ ಯಾವುದೇ ಮನೆಗಳನ್ನು ಮತ್ತು ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ. |
| ಈ) | ಕರ್ನಾಟಕ ಗೃಹ ಮಂಡಳಿಯವರು ಮನೆ ನಿವೇಶನಗಳನ್ನು ಗುರುತಿಸಿ ನೀಡಿ ವಿಫಲವಾಗಿ ಖಾಸಗಿಯವರ ಲೂಟಿಗೆ ಮಣಿದಿದೆ ಎಂದು ನಿವೇಶನಕ್ಕೆ ಅರ್ಜಿ ಸಲ್ಲಿಸಿ, ಸಲ್ಲಿಸಿದವರು ಆರೋಪ ಮಾಡುತ್ತಿದ್ದು, ಈ ಕೂಡಲೇ ಕ್ರಮ ಕೈಗೊಳ್ಳುವುದು ವಿವರ ನೀಡುವುದು ; | ಕರ್ನಾಟಕ ಗೃಹ ಮಂಡಳಿಯು ರಾಜ್ಯದ ವಿವಿಧೆಡೆ ವಸತಿ ಬಡಾವಣೆ ಅಭಿವೃದ್ಧಿಪಡಿಸಲು ಸೂಕ್ತ ಜಮೀನನ್ನು ಗುರುತಿಸಿ ಬೇಡಿಕೆ ಸಮೀಕ್ಷೆ ಕರೆದು ಬೇಡಿಕೆಗನುಗುಣವಾಗಿ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಿ, ಸಾರ್ವಜನಿಕರಿಗೆ ಹಾಗೂ ಆರ್ಥಿಕ ದುರ್ಬಲ ವರ್ಗದವರಿಗೆ ನಿವೇಶನ ಮತ್ತು ಮನೆಗಳನ್ನು ಹಂಚಿಕೆ ಮಾಡಲಾಗುತ್ತಿದೆ. |

ಸಂಖ್ಯೆ:ವಇ 236 ಕಗೃಮಂ 2025

B. Zameer

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು